# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಸಿ.ಸಿ ನಂ.1258-2016** **ಡಿ. ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಉಮೇಶ್<br>ಗೊದ್ದನಪುರ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 07-08-2023. |

## ಪಾಟೀ ಸವಾಲುಃ ಪಿರ್ಯಾದಿ ಪರ ಶ್ರೀ ಕೆ.ಎಸ್.ಎಂ ವಕೀಲರಿಂದಃ

ಸಹಿ ಮಾಡಿದ ನಿಪಿ-1 ಹೇಗೆ ಪಿರ್ಯಾದಿದಾರರು ಬಳಿ ಹೋಯಿತು ಎಂಬ ಪ್ರಶ್ನೆಗೆ ಸಾಕ್ಷಿ ನಾನು ನಿಪಿ-1 ಕ್ಕೆ ಸಹಿ ಮಾಡಿರುವುದಿಲ್ಲ, ಬೈಕ್ ಕೊಡಿಸುವಂತೆ ಕೇಳಿ ಪಿರ್ಯಾದಿದಾರರಿಗೆ ನಾನು ಚೆಕ್ ಬುಕ್ ಅನ್ನು ನೀಡಿದ್ದೆನು. 2015 ರಲ್ಲಿ ನಾನು ಪಿರ್ಯಾದಿದಾರರನ್ನು ಸ್ಪೆಂಡರ್ ಬೈಕ್ ಅನ್ನು ಕೊಡಿಸುವಂತೆ ಕೇಳಿದ್ದೆನು. ಅದರೆ ಚೆಕ್ ಬುಕ್ ಅನ್ನು 2016 ರಲ್ಲಿ ಮಾಡಿಸಲಾಗಿರುತ್ತದೆ. ನಾನು ಕಡಕೊಳ ಶಾಖೆಯ ಯುಕೋ ಬ್ಯಾಂಕ್‌ನಲ್ಲಿ ನನ್ನ ಖಾತೆಯನ್ನು ತೆರೆದಿರುತ್ತೇನೆ. ನಾನು ಖಾತೆ ತೆರೆಯು ಸಮಯ ಕಡಕೊಳದ ಯುಕೋ ಬ್ಯಾಂಕಿಗೆ ಹೋಗಿದ್ದೆನು. ನಾನು ಹೇಳುವಂತೆ ಕಡಕೊದಲ್ಲಿ ಯಾವುದೇ ಯುಕೋ ಬ್ಯಾಂಕ್ ನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ಮೈಸೂರು ಶಾಖೆಯ ಯುನಿಯನ್ ಬ್ಯಾಂಕಿಗೆ ಸೇರಿದ ಚೆಕ್ಕು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಚೆಕ್ ಸಹ ಪಿರ್ಯಾದಿದಾರರ ಬಳಿಯೇ ಇತ್ತು ಎಂದು ನುಡಿಯುತ್ತಾರೆ. ನನಗೆ ಅಷ್ಟಾಗಿ ತಿಳುವಳಿಕೆ ಇಲ್ಲದ ಕಾರಣ ಪಿರ್ಯಾದಿದಾರರು ನನ್ನ ಚಿಕ್ಕಪ್ಪನಾಗಿದ್ದರಿಂದ ಅವರನ್ನು ಬೈಕ್ ಕೊಡಿಸುವಂತೆ ಕೇಳಿರುತ್ತೇನೆ. ಪಿರ್ಯಾದಿದಾರರು ನನಗೆ ಬೈಕ್ ಕೊಡಿಸಿರುವುದಿಲ್ಲ. ಪಿರ್ಯಾದಿದಾರರು ಯಾವುದೇ ಬೈಕ್ ಶೋ ರೂಂ ನಲ್ಲಿ ಇಟ್ಟಿರುವುದಿಲ್ಲ. ಪಿರ್ಯಾದಿದಾರರು ನನಗೆ ನಂಜನಗೂಡಿನ ಶೋಂ ರೂಂ ನಲ್ಲಿ ಬೈಕ್ ಕೊಡಿಸುವುದಾಗಿ ತಿಳಿಸಿದ್ದರು. ಪಿರ್ಯಾದಿದಾರರು ನಾನು ಚೆನ್ನಾಗಿ ಇದ್ದುದ್ದರಿಂದ ನಾನು ಚೆಕ್ ಅನ್ನು ಕೇಳಿರುವುದಿಲ್ಲ ಅವರ ಬಳಿಯೇ ಇಟ್ಟಿರುತ್ತೇನೆ.

2. ಪಿರ್ಯಾದಿದಾರರು ನಿಮಗೆ ಬೈಕ್ ಅನ್ನು ಏಕೆ ಕೊಡಿಸಲಿಲ್ಲ ಎಂದು ನೀವೇನಾದರೂ ಕೇಳಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಪಿರ್ಯಾದಿದಾರರ ಪತ್ನಿಗೂ ಅವರ ತವರು ಮನೆಯವರಿಗೂ ಆಸ್ತಿ ವಿಚಾರದಲ್ಲಿ ಜಗಳ ಆಗಿದ್ದು, ಆ ಸಮಯ ಪಿರ್ಯಾದಿದಾರರು ನನ್ನನ್ನು ಸಾಕ್ಷಿಯಾಗಿ ಬರುವಂತೆ ಕೇಳಿಕೊಂಡಿದ್ದು, ನಾನು ಸಾಕ್ಷಿ ಆಗಿ ಬರಲು ನಿರಾಕರಿಸಿದ್ದರಿಂದ ಪಿರ್ಯಾದಿದಾರರು ನನ್ನ ಜೊತೆ ಮಾತನಾಡುವುದನ್ನು ಬಿಟ್ಟಿರುತ್ತಾರೆ. ಪಿರ್ಯಾದಿದಾರರು ನನ್ನ ಚೆಕ್ ಅನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ನಾನು ಯಾವುದೇ ದೂರು ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ಈ ಕೇಸು ಹಾಕಿದ ನಂತರವೇ ನನಗೆ ಈ ಚೆಕ್ಕಿನ ಬಗ್ಗೆ ತಿಳಿದುಬಂದಿರುತ್ತದೆ.

3.ನಾನು ನನ್ನ ಕುಟುಂಬದ ಅವಶ್ಯಕತೆಗಾಗಿ ಮತ್ತು ಕೈ ಸಾಲ ತೀರಿಸಲು ದಿ.03-12-2015 ರಂದು ಪಿರ್ಯಾದಿದಾರರಿಂದ ರೂ.5,00,000/- ಗಳನ್ನು ಕೈ ಸಾಲವಾಗಿ ಪಡೆದುಕೊಂಡು ಅದನ್ನು 2 ತಿಂಗಳ ಒಳಗಾಗಿ ಮರುಪಾವತಿ ಮಾಡಲು ಒಪ್ಪಿದ್ದೆನು ಎಂದರೆ ಸರಿಯಲ್ಲ. 2 ತಿಂಗಳ ವಾಯಿದೆ ಕಳೆದ ನಂತರ ಪಿರ್ಯಾದಿದಾರರು ನನ್ನನ್ನು ಸಾಲದ ಹಣವನ್ನು ಮರುಪಾವತಿ ಮಾಡುವಂತೆ ಕೇಳಿದಾಗ ನಾನು ಅವರಿಗೆ ನಿಪಿ-1 ರ ಚೆಕ್ ಅನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ನಾನು ನೀಡಿದ ಚೆಕ್‌ಅನ್ನು ಪಿರ್ಯಾದಿದಾರರು ನಗದೀಕರಣಕ್ಕಾಗಿ ಹಾಜರುಪಡಿಸಿದ್ದು, ನನ್ನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂದು ಚೆಕ್ ವಾಪಸ್ಸು ಬಂದಿರುತ್ತದೆ ಎಂದರೆ ಸರಿಯಲ್ಲ. ಚೆಕ್ ಅಮಾನ್ಯಗೊಂಡಿರುವುದರಿಂದ ನಾನು ಎನ್.ಐ ಕಾಯ್ದೆ ಅಡಿ ಅಪರಾಧ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಪಿರ್ಯಾದಿದಾರರಿಗೆ ಯಾವುದೇ ಚೆಕ್ ಅನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಪಿರ್ಯಾದಿದಾರರಿಗೆ ನೀಡಬೇಕಾದ ಸಾಲದ ಹಣ ಭಾಧ್ಯತೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**